# ಸಾಲುದೀಪಗಳ ಪುನೀತ ರೂಪಕ

**ಪುನೀತ್ ಶ್ರದ್ಧಾಂಜಲಿ ಸಂದರ್ಭದಲ್ಲಿ, ಅರಮನೆ ಮೈದಾನದಲ್ಲಿ ಬೆಳಗಿದ ಸಾಲುದೀಪಗಳ ಬೆಳಕು ಮಾನವೀಯತೆಯ ಹುಡುಕಾಟದ ಪ್ರಯತ್ನವಾಗಿತ್ತೆ?**

■ ವಿ.ಆರ್.



‘ಪುನೀತ ನಮನ’ದಲ್ಲಿ ಸಾಲುದೀಪಗಳು

ಸಾಲುದೀಪಗಳು ಎನ್ನುವ ಮಾತನ್ನು ಆಗಾಗ ಬಳಸುತ್ತೇವೆ. ದೀಪದಸಾಲು ಬೆಳಕಿನ ಹೊನಲನ್ನು ಸೂಚಿಸುವಂತಹದ್ದು; ಸಮಾಜಕ್ಕೆ ಬೆಳಕಾಗಿ ಪರಿಣಮಿಸಿದ ಚೇತನಗಳ ವರ್ಚಸ್ಸನ್ನು ಕುರಿತಾದುದು. ಈ ಸಾಲುದೀಪಗಳ ರೂಪಕ ‘ಪುನೀತ್ ನಮನ’ ಕಾರ್ಯಕ್ರಮದಲ್ಲಿ ಎದ್ದುಕಾಣುವಂತಿತ್ತು. ಪುನೀತ್ ರಾಜಕುಮಾರ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಿಕ್ಕಾಗಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ಕಳೆದ ವಾರ ನಡೆದ ಕಾರ್ಯಕ್ರಮದಲ್ಲಿ, ಸಾವಿರಾರು ಜನ ದೀಪಗಳನ್ನು ಕೈಗಳಲ್ಲಿ ಹಿಡಿದು, ಕೈಗಳಲ್ಲಿನ ಮೊಬೈಲ್‌ಗಳ ಟಾರ್ಚುಗಳನ್ನೇ ದೀಪಗಳಾಗಿಸಿಕೊಂಡು ದೀಪಧಾರಿಗಳಂತೆ ನಿಂತಿದ್ದರು. ಬಯಲಿನ ತುಂಬಾ ಬೆಳಕಿನ ಹೊನಲು.

ಅಷ್ಟೊಂದು ಜನರು ಏಕಕಾಲದಲ್ಲಿ ದೀಪ ಬೆಳಗಿಸಿದ್ದು ಕೇವಲ ಸಾಂಕೇತಿಕ ಕ್ರಿಯೆಯಂತೆ ಇರಲಿಲ್ಲ. ಆ ಬೆಳಕಿನ ಹೊನಲು ಹಲವು ಅರ್ಥಗಳ ಹರಿವಿನಂತಿತ್ತು. ಅಗಲಿದ ಚೇತನವನ್ನು ಬೆಳಕಿನ ಕುಡಿಯ ರೂಪದಲ್ಲಿ ನೋಡುತ್ತೇವೆ. ದೀಪದ ಬೆಳಕು ನಮ್ಮನ್ನು ಅವರಿಗೆ ಕಾಣಿಸುವುದು ಹಾಗೂ ಅವರನ್ನು ನಮ್ಮ ಮನಸಿಗೆ ಕಾಣಿಸುವುದು. ಮತ್ತೊಂದು ಅರ್ಥ, ಅಗಲಿದ ಚೇತನ ದೀಪಧಾರಿಯಂತೆ ನಮ್ಮ ನಡುವೆ ಬದುಕಿದ್ದರು ಎನ್ನುವ ಅರ್ಥ. ದೀಪ ಬೆಳಗುವಿಕೆ ಮನಸ್ಸಿನ ನೋವಿನ ಅಭಿವ್ಯಕ್ತಿಯ ರೂಪಕವೂ ಹೌದು.

‘ಪುನೀತ್ ನಮನ’ ಕಾರ್ಯಕ್ರಮದಲ್ಲಿ ಇವೆಲ್ಲ ಭಾವಗಳು ಹೊಳೆಯುತ್ತಾ ಹೋದಂತೆ ಮನಸ್ಸಿನೊಳಗೆ ಬೆಳಕಿನ ಹೊನಲು ಹರಿಯತೊಡಗಿದಂತೆನಿಸಿತು. ಆದರೆ, ಬೆಳಕಿನ ಲಹರಿ ಅಷ್ಟಕ್ಕೆ ನಿಲ್ಲುವುದಿಲ್ಲ. ಪುನೀತ್ ನೆಪದಲ್ಲಿ ದೀಪ ಹಿಡಿದು ನಿಂತವರೆಲ್ಲರೂ, ಹಣತೆಯ ಬೆಳಕಿನಲ್ಲಿ ಏನನ್ನೋ ಹುಡುಕುತ್ತಿರುವಂತೆ ಭಾಸವಾಯಿತು. ಅದು ಯಾವುದರ ಹುಡುಕಾಟ?

ಇದು ಮೌಲ್ಯಗಳು ದುಬಾರಿಯಾಗುತ್ತಿರುವ ಕಾಲ; ಸಂಬಂಧಗಳ ನಡುವೆ ಗಣಿತದ ಲೆಕ್ಕಾಚಾರ ನುಸುಳಿರುವ ಸಂದರ್ಭ. ಕೂಡುಕುಟುಂಬದ ಗ್ರೂಪ್ ಫೋಟೊಗಳು ಕಡಿಮೆಯಾಗಿ, ನ್ಯೂಕ್ಲಿಯರ್ ಕುಟುಂಬದ ಸೆಲ್ಫಿಗಳು ವಿಜೃಂಭಿಸುತ್ತಿರುವ ಸನ್ನಿವೇಶ. ಮಾನವೀಯತೆಗೆ ವಿರುದ್ಧವಾಗಿ ಇಡೀ ಸಮಾಜ ಚಲಿಸುತ್ತಿರುವಂತೆ ಕಾಣಿಸುತ್ತಿರುವ ವೇಳೆಯಲ್ಲಿ, ಯಾವುದಾದರೂ ಒಂದು ಆರ್ದ್ರ ವಿದ್ಯಮಾನ ಕಾಣಿಸಿದರೂ ಪ್ರವಾಹದಲ್ಲಿ ಹುಲ್ಲುಕಡ್ಡಿ ಸಿಕ್ಕಂತೆನ್ನಿಸುತ್ತದೆ. ಅಂಥದೊಂದು ವಿರಳ ವಿದ್ಯಮಾನದ ರೂಪದಲ್ಲಿ ಪುನೀತ್ ಕಾಣಿಸುತ್ತಿದ್ದಾರೆ. ಸಾವಿನ ಬಳಿಕ ಅವರ ಸಮಾಜಮುಖಿ ವ್ಯಕ್ತಿತ್ವ ಬೆಳಕಿಗೆ ಬರುತ್ತಿದೆ. ಸಮಾಜದ ಅಂತರಂಗ ಎಂಥ ನಾಯಕತ್ವವನ್ನು ಬಯಸುತ್ತದೋ ಅಂಥ ಮಾದರಿಯಾಗಿ ಪುನೀತ್ ಕಾಣಿಸುತ್ತಿದ್ದಾರೆ. ಸಿನಿಮಾಗಿಂತಲೂ ಸಿನಿಮೇತರ ಕಾರಣಗಳಿಂದಲೇ ಪುನೀತ್ ಜನಮನಕ್ಕೆ ಹೆಚ್ಚು ಹತ್ತಿರವಾಗಿದ್ದಾರೆ ಎನ್ನಿಸುತ್ತದೆ. ಅವರ ನಗು, ಸರಳತೆ, ಹೃದಯವಂತಿಕೆ – ಎಲ್ಲವೂ ಈ ಸಮಾಜ ಕನವರಿಸುವ ಮೌಲ್ಯಗಳೇ ಆಗಿವೆ.

ಬಹಿರಂಗವಾಗಿ ನಾವು ಎಷ್ಟು ಕ್ರೂರವಾಗಿದ್ದರೂ ಅಮಾನವೀಯವಾಗಿದ್ದರೂ ನಮ್ಮೆಲ್ಲರ ಅಂತರಂಗ ಮಾನವೀಯತೆಯ ಹುಡುಕಾಟದಲ್ಲಿ ಇರುತ್ತದೆನ್ನಿಸುತ್ತದೆ. ಅರಮನೆ ಮೈದಾನವನ್ನು ಬೆಳಗಿದ ಬೆಳಕಿನ ಹೊನಲು ಕೂಡ ಅಂಥದೊಂದು ಹುಡುಕಾಟ. ಹಣತೆಯ ರೂಪದಲ್ಲಿ, ಮೊಬೈಲ್ ಟಾರ್ಚ್‌ಗಳ ರೂಪದಲ್ಲಿ ನಮ್ಮ ಅಂತರಂಗಗಳೇ ಬೆಳಗಿದ ಸನ್ನಿವೇಶವದು. ದೀಪ ಹೊತ್ತಿಸಿದವರು ಪುನೀತ್ ಅವರನ್ನಷ್ಟೇ ಕಾಣಲು ಪ್ರಯತ್ನಿಸಲಿಲ್ಲ; ಆ ಬೆಳಕಿನಲ್ಲಿ ನಮ್ಮೊಳಗನ್ನು ನಾವು ನೋಡಿಕೊಳ್ಳುವ ಹಂಬಲವೂ ಅವರಲ್ಲಿ ಇದ್ದಂತಿತ್ತು. ಹಾಗೆ ನಮ್ಮನ್ನು ನಾವು ನೋಡಿಕೊಂಡಷ್ಟೂ ಪುನೀತ್ ಅಗಲಿಕೆಯ ನೋವು ಹೆಚ್ಚಾಗುತ್ತದೆ. ಆ ನೋವು ಮಾಯದಿರಲಿ. ಏಕೆಂದರೆ, ನೋವಿನ ಕಡಲಲ್ಲೇ ಹೊಸ ಹುಟ್ಟು ಸಾಧ್ಯ.

ಬೇಂದ್ರೆಯಜ್ಜನ ಮಾತನ್ನು ನೆನಪಿಸುವಂತೆ, ‘ನಾವು ಪುನೀತ್‌ರನ್ನು ಹೂತಿಲ್ಲ, ಬಿತ್ತಿದ್ದೇವೆ’ ಎಂದು ರಾಘವೇಂದ್ರ ರಾಜ್‌ಕುಮಾರ್ ಉದ್ಗರಿಸಿದರಷ್ಟೇ. ಆ ಮಾತು ನಿಜವಾಗಬೇಕಾದರೆ, ಪುನೀತ್ ಸ್ಮರಣೆಯ ಮೂಲಕ ‘ಒಳ್ಳೆಯತನ’ದ ಬೀಜಗಳು ಕೆಲವು ಮನಸ್ಸುಗಳಲ್ಲಾದರೂ ಮೊಳೆಯಬೇಕು. ಹಾಗಾದಲ್ಲಿ ಅದು ಅಗಲಿದ ಸುಂದರ ವ್ಯಕ್ತಿತ್ವಕ್ಕೆ ಸಲ್ಲಿಸುವ ನಿಜವಾದ ಗೌರವವಾದೀತು.

ನಾವೆಲ್ಲರೂ ದೀಪ ಹಚ್ಚೋಣ. ಆ ಬೆಳಕಲ್ಲಿ ಅಗಲಿದ ಸಾಲುದೀಪಗಳನ್ನು ಕಾಣೋಣ; ಮುಖ್ಯವಾಗಿ ನಮ್ಮೊಳಗೇನಾದರೂ ಮಾನವೀಯತೆಯ ಪಸೆ ಉಳಿದುಕೊಂಡಿದೆಯಾ ಎನ್ನುವುದನ್ನು ಹುಡುಕೋಣ.

ಪ್ರತಿಕ್ರಿಯಿಸಿ: feedback@sudha.co.in